ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2016-17 ದಿನಾಂಕ: 01-12-2016

# ಪತ್ರಿಕಾ ಆಮಂತ್ರಣ

1. **30ನೇ ಅಖಿಲ ಭಾರತ ಮಟ್ಟದ ಕಬಡ್ಡಿ ಪಂದ್ಯಾವಳಿ: ಬಹುಮಾನ ವಿತರಣಾ ಸಮಾರಂಭ:**

**ಮುಖ್ಯ ಅತಿಥಿಗಳು:**

**ಹನುಮಂತೇಗೌಡ,**

**ಅಧ್ಯಕ್ಷರು,**

**ಕರ್ನಾಟಕ ರಾಜ್ಯ ಅಮೆಚೂರ್ ಕಬಡ್ಡಿ ಸಂಘ,**

**ಶ್ರೀಮತಿ ಮಮತಾ ಅಭಿಷೇಕ್ ಪೂಜಾರಿ,**

**ಅರ್ಜುನ ಪ್ರಶಸ್ತಿ ವಿಜೇತರು**

**ದಿನಾಂಕ: 02-12-2016. ಶುಕ್ರವಾರ, ಸಂಜೆ 4-00 ಗಂಟೆಗೆ**

**ಸ್ಥಳ: ಶ್ರೀ ಕಂಠೀರವ ಒಳಾಂಗಣ ಕ್ರೀಡಾಂಗಣ, ಕಸ್ತೂರಬಾ ರಸ್ತೆ,**

**ಸಂಪಂಗಿರಾಮನಗರ, ಬೆಂಗಳೂರು.**

<u>ಪತ್ರಿಕಾ ಪ್ರಕಟಣೆ</u>

# ರಾಜೀವ್ ಆರೋಗ್ಯ ಭಾಗ್ಯ ಯೋಜನೆ: ಅರ್ಜಿ ಆಹ್ವಾನ

ಬೆಂಗಳೂರು ಡಿಸೆಂಬರ್ 1 (ಕರ್ನಾಟಕ ವಾರ್ತೆ)

ರಾಜ್ಯದ ಪತ್ರಕರ್ತರು ಮತ್ತು ಅವರ ಕುಟುಂಬದ ಸದಸ್ಯರಿಗಾಗಿ 'ರಾಜೀವ್ ಅರೋಗ್ಯ ಭಾಗ್ಯ' ಯೋಜನೆಯನ್ನು ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಮತ್ತು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಯೋಗದಲ್ಲಿ ರಾಜ್ಯ ಸರ್ಕಾರವು ಜಾರಿಗೆ ತಂದಿದ್ದು ಮೊದಲನೇ ಹಂತದಲ್ಲಿ ಯೋಜನೆಗೆ ಒಳಪಡಲಿಚ್ಚಿಸುವ ಪತ್ರಕರ್ತರಿಂದ ಅರ್ಜಿ ಆಹ್ವಾನಿಸಲಾಗಿದೆ.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಲ್ಲಿ ಪತ್ರಿಕಾ ಮಾನ್ಯತೆ ಹೊಂದಿರುವ ಹಾಗೂ ಇಲಾಖೆಯ ಮಾಧ್ಯಮ ಪಟ್ಟಿಯಲ್ಲಿರುವ ಪತ್ರಿಕೆಗಳಲ್ಲಿ ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸುತ್ತಿರುವ ಪತ್ರಕರ್ತರು ಮತ್ತು ಅವರ ಕುಟುಂಬದ ಸದಸ್ಯರಿಗೆ ಈ ಯೋಜನೆ ಅನ್ವಯಿಸಲಿದ್ದು, ಯೋಜನೆಯಡಿ ಗಂಭೀರ ಹಾಗೂ ಆಘಾತಕಾರಿಯಾದ ಏಳು ನಿರ್ದಿಷ್ಟ ಖಾಯಿಲೆಗಳಿಗೆ ರಾಜ್ಯದಾದ್ಯಂತ ನೋಂದಾಯಿತ ಸ್ಪೆಷಾಲಿಟಿ ಆಸ್ಪತ್ರೆಗಳಲ್ಲಿ ಉಚಿತವಾಗಿ ಶಸ್ತ್ರ ಚಿಕಿತ್ಸೆ ಹಾಗೂ ಆರೋಗ್ಯ ಸೌಲಭ್ಯವನ್ನು ಒದಗಿಸಲಾಗುವುದು.

ಮೊದಲನೇ ಹಂತದಲ್ಲಿ ಯೋಜನೆಗೆ ಒಳಪಡಲಿಚ್ಚಿಸುವ ಪತ್ರಕರ್ತರು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ವೆಬ್‌ಸೈಟ್ www.karnatakavarthe.org ನಲ್ಲಿ ಅರ್ಜಿ ಡೌನ್ ಲೋಡ್ ಮಾಡಿಕೊಂಡು ಭರ್ತಿಮಾಡಿ ಅಗತ್ಯ ದಾಖಲಾತಿಗಳೊಂದಿಗೆ ಆಯಾ ಜಿಲ್ಲಾ ವಾರ್ತಾಧಿಕಾರಿಗಳ ಮೂಲಕ ಡಿಸೆಂಬರ್ 15, 2016 ರೊಳಗೆ ಸಲ್ಲಿಸುವುದು.

ಡಿಸೆಂಬರ್ 15, 2016 ರ ನಂತರ ಬರುವ ಅರ್ಜಿಗಳನ್ನು ಎರಡನೇ ಹಂತದಲ್ಲಿ ಪರಿಗಣಿಸಲಾಗುವುದು.

ಹೆಚ್ಚಿನ ಮಾಹಿತಿಗೆ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸುದ್ದಿ ಮತ್ತು ಪತ್ರಿಕಾ ಶಾಖೆಯನ್ನು ಅಥವಾ ಜಿಲ್ಲಾ ವಾರ್ತಾ ಕಚೇರಿಗಳನ್ನು ಸಂಪರ್ಕಿಸುವುದು.

ಎಸ್‌ಎಂ;ಎಂಆರ್‌ಎಂ:ಜಿಪಿಆರ್.

# ಸರ್ವೇಯರ್ ಎಸಿಬಿ ಬಲೆಗೆ

ಬೆಂಗಳೂರು, ಡಿ. 1 (ಕರ್ನಾಟಕ ವಾರ್ತೆ)

ಕೃಷಿ ಭೂಮಿಯ ನಕ್ಷೆ ತಯಾರಿಸಲು ಲಂಚ ಸ್ವೀಕರಿಸುತ್ತಿದ್ದ ಸಂದರ್ಭದಲ್ಲಿ ಶಿರಾ ತಾಲ್ಲೂಕು ಕಛೇರಿ ಸರ್ವೇಯರ್ ಮೂಡಲಗಿರಿಯಪ್ಪ ಅವರನ್ನು ಭ್ರಷ್ಟಾಚಾರ ನಿಗ್ರಹ ದಳ ಬಂಧಿಸಿದೆ.

ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನ ಚಿಕ್ಕಗಿರಿಯೇನಹಳ್ಳಿಯಲ್ಲಿ ವಾಸವಾಗಿರುವ ಕೃಷಿಕರೊಬ್ಬರು ತಮ್ಮ ಪಿತ್ರಾರ್ಜಿತ ಕೃಷಿ ಭೂಮಿಯನ್ನು ವಿಭಾಗ ಮಾಡಿಕೊಂಡಿರುತ್ತಾರೆ. ಈ ವಿಭಾಗವಾದ ಕೃಷಿ ಭೂಮಿಯ ಖಾತೆಯನ್ನು ಮಾಡಿಸಲು ಸರ್ವೇ ನಕ್ಷೆ (ಸ್ಕೆಚ್) ತಯಾರಿಸುವುದು ಅನಿವಾರ್ಯವಾಗಿರುತ್ತದೆ. ಆದ್ದರಿಂದ ಈ ವಿಭಾಗವಾದ ಕೃಷಿ ಭೂಮಿಯ ನಕ್ಷೆ (ಸ್ಕೆಚ್) ಯನ್ನು ತಯಾರಿಸಿಕೊಡುವಂತೆ ಶಿರಾ ತಾಲ್ಲೂಕು ಕಛೇರಿಯಲ್ಲಿ ಅರ್ಜಿದಾರರು ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಆದರೆ, ಶ್ರೀ. ಮೂಡಲಗಿರಿಯಪ್ಪ, ಸರ್ವೇಯರ್, ತಾಲ್ಲೂಕು ಕಛೇರಿ, ಶಿರಾ ತಾಲ್ಲೂಕು ರವರು ಈ ಸಂಬಂಧ ಸರ್ವೇ ನಕ್ಷೆ (ಸ್ಕೆಚ್) ತಯಾರಿಸಲು ರೂ.5,000/- ಗಳ ಲಂಚದ ಹಣವನ್ನು ನೀಡುವಂತೆ ಅರ್ಜಿದಾರರಿಗೆ ಒತ್ತಾಯಿಸಿ, ಕಡತವನ್ನು ಬಾಕಿ ಇಟ್ಟಿರುತ್ತಾರೆ. ಈ ಬಗ್ಗೆ ಅರ್ಜಿದಾರರು ಭ್ರಷ್ಟಾಚಾರ ನಿಗ್ರಹ ದಳಕ್ಕೆ ದೂರನ್ನು ಸಲ್ಲಿಸಿರುತ್ತಾರೆ.

ದೂರುದಾರರು ನೀಡಿದ ದೂರಿನ ಆಧಾರದ ಮೇಲೆ ದಿನಾಂಕ: 01.12.2016 ರಂದು ಶ್ರೀ. ಮೂಡಲಗಿರಿಯಪ್ಪ, ಸರ್ವೇಯರ್, ತಾಲ್ಲೂಕು ಕಛೇರಿ, ಶಿರಾ ತಾಲ್ಲೂಕು ರವರು ದೂರುದಾರರಿಂದ ರೂ.5,000/- ಗಳ ಲಂಚದ ಹಣವನ್ನು ಸ್ವೀಕರಿಸುತ್ತಿದ್ದ ಸಂದರ್ಭದಲ್ಲಿ ಭ್ರಷ್ಟಾಚಾರ ನಿಗ್ರಹ ದಳದ ಅಧಿಕಾರಿಗಳು ನಡೆಸಿದ ಕಾರ್ಯಾಚರಣೆಯಲ್ಲಿ ಸಿಕ್ಕಿ ಬಿದ್ದಿರುತ್ತಾರೆ.

ಶ್ರೀ. ಮೂಡಲಗಿರಿಯಪ್ಪ, ಸರ್ವೇಯರ್, ತಾಲ್ಲೂಕು ಕಛೇರಿ, ಶಿರಾ ತಾಲ್ಲೂಕು, ತುಮಕೂರು ಜಿಲ್ಲೆ ರವರ ವಿರುದ್ಧ ಭ್ರಷ್ಟಾಚಾರ ತಡೆ ಕಾಯ್ದೆ-1988 ರ ಅಡಿಯಲ್ಲಿ ಪ್ರಕರಣವನ್ನು ದಾಖಲಿಸಿ, ಅವರನ್ನು ದಸ್ತಗಿರಿ ಮಾಡಲಾಗಿದೆ.

# ಗ್ರಾಮಲೆಕ್ಕಿಗ ಎಸಿಬಿ ಬಲೆಗೆ

ಬೆಂಗಳೂರು, ಡಿ. 1 (ಕರ್ನಾಟಕ ವಾರ್ತೆ)–

ಭ್ರಷ್ಟಾಚಾರ ನಿಗ್ರಹದಳದ ಅಧಿಕಾರಿಗಳು ಕಾರ್ಯಾಚರಣೆ ನಡೆಸಿ, ಕೃಷಿ ಭೂಮಿ ಖಾತೆ ವರ್ಗಾವಣೆಗೆ ಲಂಚ ಸ್ವೀಕರಿಸುತ್ತಿದ್ದ ಗೌರಿ ಬಿದನೂರು ತಾಲ್ಲೂಕಿನ ಗ್ರಾಮಲೆಕ್ಕಿಗನನ್ನು ಬಂಧಿಸಲಾಗಿದೆ.

ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕಿನ ಹಂಪಸಂದ್ರ ಗ್ರಾಮದಲ್ಲಿ ಕೃಷಿಕರೊಬ್ಬರು ಹೊಂದಿದ್ದ ಕೃಷಿ ಭೂಮಿಯನ್ನು ತಮ್ಮ ಮಕ್ಕಳ ಹೆಸರಿಗೆ ದಾನ ಪತ್ರದ ಮುಖಾಂತರ ಉಪ ನೋಂದಣಾಧಿಕಾರಿಗಳ ಕಛೇರಿಯಲ್ಲಿ ನೋಂದಾಯಿಸಿರುತ್ತಾರೆ. ನಂತರ ಈ ಕೃಷಿ ಭೂಮಿಗೆ ಸಂಬಂಧಿಸಿದಂತೆ ಖಾತೆಯನ್ನು ವರ್ಗಾವಣೆ ಮಾಡಲು ಗೌರಿಬಿದನೂರಿನ ಹೊಸೂರು ಹೋಬಳಿಯಲ್ಲಿರುವ ನೆಮ್ಮದಿ ಕೇಂದ್ರದಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಆದರೆ ಹಂಪಸಂದ್ರ ಕಂದಾಯ ವೃತ್ತದ ಗ್ರಾಮಲೆಕ್ಕಿಗರಾದ ಶ್ರೀ. ಸಂಜಯ್ ರವರು ಖಾತಾ ವರ್ಗಾವಣೆ ಮಾಡಲು ರೂ.8,000/– ಗಳ ಲಂಚದ ಹಣವನ್ನು ನೀಡುವಂತೆ ಅರ್ಜಿದಾರರನ್ನು ಒತ್ತಾಯಿಸಿರುತ್ತಾರೆ. ಈ ಬಗ್ಗೆ ದೂರುದಾರರು ಭ್ರಷ್ಟಾಚಾರ ನಿಗ್ರಹ ದಳಕ್ಕೆ ದೂರನ್ನು ಸಲ್ಲಿಸಿರುತ್ತಾರೆ.

ದೂರುದಾರರು ನೀಡಿದ ದೂರಿನ ಆಧಾರದ ಮೇಲೆ ದಿನಾಂಕ: 01.12.2016 ರಂದು ಶ್ರೀ. ಸಂಜಯ್, ಗ್ರಾಮಲೆಕ್ಕಿಗರು, ಹಂಪಸಂದ್ರ ಕಂದಾಯ ವೃತ್ತ, ಚಿಕ್ಕಬಳ್ಳಾಪುರ ಜಿಲ್ಲೆ ರವರು ಹೊಸೂರು ಹೋಬಳಿಯಲ್ಲಿರುವ ನೆಮ್ಮದಿ ಕೇಂದ್ರದಲ್ಲಿ ದೂರುದಾರರಿಂದ ರೂ.8,000/– ಗಳ ಲಂಚದ ಹಣವನ್ನು ಸ್ವೀಕರಿಸುತ್ತಿದ್ದ ಸಂದರ್ಭದಲ್ಲಿ ಭ್ರಷ್ಟಾಚಾರ ನಿಗ್ರಹ ದಳದ ಅಧಿಕಾರಿಗಳು ನಡೆಸಿದ ಕಾರ್ಯಾಚರಣೆಯಲ್ಲಿ ಸಿಕ್ಕಿ ಬಿದ್ದಿರುತ್ತಾರೆ.

ಶ್ರೀ. ಸಂಜಯ್, ಗ್ರಾಮಲೆಕ್ಕಿಗರು, ಹಂಪಸಂದ್ರ ಕಂದಾಯ ವೃತ್ತ, ಚಿಕ್ಕಬಳ್ಳಾಪುರ ಜಿಲ್ಲೆ ರವರ ವಿರುದ್ಧ ಭ್ರಷ್ಟಾಚಾರ ತಡೆ ಕಾಯ್ದೆ–1988 ರ ಅಡಿಯಲ್ಲಿ ಪ್ರಕರಣವನ್ನು ದಾಖಲಿಸಿ, ಅವರನ್ನು ದಸ್ತಗಿರಿ ಮಾಡಲಾಗಿದೆ.

## ಫ್ಯಾಕ್ಟರಿ ಮತ್ತು ಬಾಯ್ಲರುಗಳ ಸಹಾಯಕ ನಿರ್ದೇಶಕರ ಕಚೇರಿ ಮತ್ತು ಮನೆಗೆ ಎಸಿಬಿ ದಾಳಿ

ಬೆಂಗಳೂರು, ಡಿ. 1 (ಕರ್ನಾಟಕ ವಾರ್ತೆ)–

ಮಂಗಳೂರು ಕಾರ್ಮಿಕ ಇಲಾಖೆಗೆ ಸಂಬಂಧಿಸಿದ ಘಟಕವಾದ ಫ್ಯಾಕ್ಟರಿ ಮತ್ತು ಬಾಯ್ಲರ್‌ಗಳ ವಿಭಾಗ, ಮಂಗಳೂರು ಘಟಕದ ಸಹಾಯಕ ನಿರ್ದೇಶಕರಾಗಿರುವ ಶ್ರೀ. ಸುರೇಶ್ ಎಂಬುವರು ಬೆಂಗಳೂರಿಗೆ ವರ್ಗಾವಣೆಯಾಗಿದ್ದೂ, ಮಂಗಳೂರಿನಲ್ಲಿ ಸಣ್ಣ ಕೈಗಾರಿಕೆಗಳಿಗೆ ಮತ್ತು ಫ್ಯಾಕ್ಟರಿಗಳಿಗೆ ಪರವಾನಗಿಗಳ ನವೀಕರಣ ಪ್ರಮಾಣ ಪತ್ರಗಳನ್ನು ವಿತರಿಸುವುದಾಗಿ ಅಂತಹ ಸಣ್ಣ ಕೈಗಾರಿಗೆ ಮತ್ತು ಫ್ಯಾಕ್ಟರಿಗಳಿಂದ ಲಂಚದ ಹಣವನ್ನು ಸಂಗ್ರಹಿಸಿರುವ ಬಗ್ಗೆ ಭ್ರಷ್ಟಾಚಾರ ನಿಗ್ರಹ ದಳಕ್ಕೆ ಲಭ್ಯವಾದ ನಿಖರ ದೂರಿನ ಆಧಾರದ ಮೇಲೆ ಶ್ರೀ. ಸುರೇಶ್, ಸಹಾಯಕ ನಿರ್ದೇಶಕರು, ಫ್ಯಾಕ್ಟರಿ ಮತ್ತು ಬಾಯ್ಲರ್‌ಗಳ ವಿಭಾಗ, ಮಂಗಳೂರು ಕಛೇರಿ ಮೇಲೆ ಮತ್ತು ಅವರ ಮನೆಯ ಮೇಲೆ ಭ್ರಷ್ಟಾಚಾರ ನಿಗ್ರಹ ದಳದ ಅಧಿಕಾರಿಗಳ ತಂಡವು ದಿನಾಂಕ: 30.11.2016 ರಂದು ಅನಿರೀಕ್ಷಿತ ಭೇಟಿ ನೀಡಿ, ಕ್ಷಿಪ್ರ ದಾಳಿ ನಡೆಸಲಾಯಿತು.

ಅನಿರೀಕ್ಷಿತ ಭೇಟಿ ಮತ್ತು ದಾಳಿ ನಡೆಸುವ ಸಂದರ್ಭದಲ್ಲಿ ಅವರ ಕಛೇರಿಯಲ್ಲಿ ಅನಧಿಕೃತವಾಗಿ ಹಾಗೂ ಲೆಕ್ಕಕ್ಕೆ ಸಿಗದ ರೂ. 1,12,865/– ಹಾಗೂ ಅವರ ನಿವಾಸದಲ್ಲಿ ರೂ. 2,36,650/– ಗಳ ಮೊತ್ತದ ಹಣವು ಕಂಡುಬಂದಿರುತ್ತದೆ.

ಈ ಬಗ್ಗೆ ಭ್ರಷ್ಟಾಚಾರ ತಡೆ ಕಾಯ್ದೆ–1988 ರ ಅಡಿಯಲ್ಲಿ ಪ್ರಕರಣವನ್ನು ದಾಖಲಿಸಲಾಗಿದೆ ಹಾಗೂ ಶ್ರೀ. ಸುರೇಶ್, ಸಹಾಯಕ ನಿರ್ದೇಶಕರು, ಫ್ಯಾಕ್ಟರಿ ಮತ್ತು ಬಾಯ್ಲರ್‌ಗಳು, ಮಂಗಳೂರು ರವರನ್ನು ಬಂಧಿಸಲಾಗಿದೆ. ಅಕ್ರಮ ಹಾಗೂ ಲೆಕ್ಕಕ್ಕೆ ಸಿಗದೇ ಸಂಗ್ರಹಿಸಿದ್ದ ಒಟ್ಟು ರೂ.3,48,515/– ಗಳ ನಗದು ಮೊತ್ತವನ್ನು ವಶಪಡಿಸಿಕೊಳ್ಳಲಾಗಿದೆ

## ಕೆಬಿಜೆಎನ್‌ಎಲ್ ಪುನರ್ವಸತಿ ಕಚೇರಿ ದ್ವಿ.ದ.ಸ ಎಸಿಬಿ ಬಲೆಗೆ

ಬೆಂಗಳೂರು, ಡಿ. 1 (ಕರ್ನಾಟಕ ವಾರ್ತೆ)–

ಸಕಾರದ ಯಾವುದೇ ಜಲ ಯೋಜನೆಯಿಂದಾಗಿ ಮುಳುಗಡೆಯಾಗುವ ಭೂಮಿಯ ಮಾಲೀಕರಿಗೆ ಸರ್ಕಾರದ ವತಿಯಿಂದ ಒಂದು ಉಚಿತ ನಿವೇಶನವನ್ನು ನೀಡಲಾಗುತ್ತದೆ. ಇಂತಹ ಯೋಜನಾ ನಿರಾಶ್ರಿತರಿಗೆ

ನೀಡಲಾಗುವ ನಿವೇಶನಗಳು 15 ವರ್ಷ ಮಾರಾಟ ಮಾರಾಟ ಮಾಡಲು ನಿರ್ಬಂಧವಿರುತ್ತದೆ. 15 ವರ್ಷಗಳ ನಂತರ ಇಂತಹ ನಿವೇಶನವನ್ನು ಮಾರಾಟ ಮಾಡಲು ಕೃಷ್ಣಾ ಭಾಗ್ಯ ಜಲ ನಿಗಮದ ಪುನರ್ವಸತಿ ಕಛೇರಿಯಿಂದ ನಿರಾಕ್ಷೇಪಣಾ ಪತ್ರವನ್ನು ಪಡೆದುಕೊಳ್ಳುವುದು ಕಡ್ಡಾಯವಾಗಿರುತ್ತದೆ.

ಬೀಳಗಿ ತಾಲ್ಲೂಕಿನಲ್ಲಿ ಯೋಜನೆಯಿಂದ ನಿರಾಶ್ರಿತರಾಗಿ 15 ವರ್ಷಗಳ ಹಿಂದೆ ನಿವೇಶನವನ್ನು ಪಡೆದಿದ್ದ ಸಾರ್ವಜನಿಕರೊಬ್ಬರಿಗೆ ಸರ್ಕಾರದ ವತಿಯಿಂದ ನೀಡಲಾಗಿದ್ದ ನಿವೇಶನವನ್ನು ಮಾರಾಟ ಮಾಡಲು ನಿರಾಕ್ಷೇಪಣಾ ಪತ್ರವನ್ನು ನೀಡುವಂತೆ ಕೃಷ್ಣಾ ಭಾಗ್ಯ ಜಲ ನಿಗಮದ ಪುನರ್ವಸತಿ ಕಛೇರಿಗೆ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಆದರೆ, ಪುನರ್ವಸತಿ ಕಛೇರಿಯಲ್ಲಿ ದ್ವಿತೀಯ ದರ್ಜೆ ಸಹಾಯಕರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಶ್ರೀ. ಅಪ್ಪೋಜಿ ಮಾದರ್ ಎಂಬುವರು ಈ ಬಗ್ಗೆ ನಿರಾಕ್ಷೇಪಣಾ ಪತ್ರವನ್ನು ವಿತರಿಸಲು ರೂ.10,000/- ಗಳ ಲಂಚದ ಹಣವನ್ನು ನೀಡುವಂತೆ ಅರ್ಜಿದಾರರನ್ನು ಒತ್ತಾಯಿಸಿರುತ್ತಾರೆ ನಂತರ ರೂ.4,000/- ಗಳನ್ನು ಪಡೆದುಕೊಂಡು ನಿರಾಕ್ಷೇಪಣಾ ಪತ್ರವನ್ನು ವಿತರಿಸಲು ಒಪ್ಪಿರುತ್ತಾರೆ. ಈ ಬಗ್ಗೆ ಅರ್ಜಿದಾರರು ಭ್ರಷ್ಟಾಚಾರ ನಿಗ್ರಹ ದಳಕ್ಕೆ ದೂರನ್ನು ಸಲ್ಲಿಸಿರುತ್ತಾರೆ.

ದೂರುದಾರರು ನೀಡಿದ ದೂರಿನನ್ವಯ ದಿನಾಂಕ: 30.11.2016 ರಂದು ಶ್ರೀ. ಅಪ್ಪೋಜಿ ಮಾದರ್, ದ್ವಿತೀಯ ದರ್ಜೆ ಸಹಾಯಕರು, ಪುನರ್ವಸತಿ ಕಛೇರಿ, ಬೀಳಗಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ರವರು ದೂರುದಾರರಿಂದ ರೂ. 4,000/- ಗಳ ಲಂಚದ ಹಣವನ್ನು ಸ್ವೀಕರಿಸುತ್ತಿದ್ದ ಸಂದರ್ಭದಲ್ಲಿ ಭ್ರಷ್ಟಾಚಾರ ನಿಗ್ರಹ ದಳದ ಅಧಿಕಾರಿಗಳು ನಡೆಸಿದ ಕಾರ್ಯಾಚರಣೆಯಲ್ಲಿ ಸಿಕ್ಕಿ ಬಿದ್ದಿರುತ್ತಾರೆ.

ಶ್ರೀ. ಅಪ್ಪೋಜಿ ಮಾದರ್, ದ್ವಿತೀಯ ದರ್ಜೆ ಸಹಾಯಕರು, ಪುನರ್ವಸತಿ ಕಛೇರಿ, ಕೃಷ್ಣಾ ಭಾಗ್ಯ ಜಲ ನಿಗಮ ರವರ ವಿರುದ್ಧ ಭ್ರಷ್ಟಾಚಾರ ತಡೆ ಕಾಯ್ದೆ-1988 ರ ಅಡಿಯಲ್ಲಿ ಪ್ರಕರಣವನ್ನು ದಾಖಲಿಸಿ ಅವರನ್ನು ದಸ್ತಗಿರಿ ಮಾಡಲಾಗಿದೆ

## ನಿರಾಕ್ಷೇಪಣಾ ಪತ್ರಕ್ಕೆ ಲಂಚ: ಉಪ ಮುಖ್ಯ ಎಲೆಕ್ಟ್ರಿಕಲ್ ಇನ್ಸ್‌ಪೆಕ್ಟರ್ ಎಸಿಬಿ ಬಲೆಗೆ

ಬೆಂಗಳೂರು, ಡಿ. 1 (ಕರ್ನಾಟಕ ವಾರ್ತೆ)-

ಬೆಂಗಳೂರು ನಗರದ ಎಲೆಕ್ಟ್ರಿಕಲ್ ಕಾಂಟ್ರಾಕ್ಟರ್ ಒಬ್ಬರು ಹಳೆ ವಿಮಾನ ನಿಲ್ದಾಣ ರಸ್ತೆಯ ಕೋನೇನ ಅಗ್ರಹಾರ ಬಳಿ ನಿರ್ಮಾಣ ಹಂತದಲ್ಲಿರುವ ಅಪಾರ್ಟ್‌ಮೆಂಟ್ಸ್ ಕಟ್ಟಡದ ಎಲೆಕ್ಟ್ರಿಕಲ್ ಕಾಂಟ್ರಾಕ್ಟ್‌ನ್ನು

ಪಡೆದುಕೊಂಡಿರುತ್ತಾರೆ.  ಈ ಅಪಾರ್ಟ್‌ಮೆಂಟ್ಸ್ ಕಟ್ಟಡಕ್ಕೆ ವಿದ್ಯುತ್ ಸಂಪರ್ಕವನ್ನು ಒದಗಿಸಲು ನಿರಾಕ್ಷೇಪಣಾ ಪತ್ರವನ್ನು ನೀಡುವಂತೆ ಕೋರಿ ಹೆಚ್ಚುವರಿ ಮುಖ್ಯ ಎಲೆಕ್ಟ್ರಿಕಲ್ ನಿರೀಕ್ಷಕರ ಕಛೇರಿ, ಬೆಂಗಳೂರು ದಕ್ಷಿಣ ವಲಯ, ಬಸವನಗುಡಿ, ಬೆಂಗಳೂರು ರವರಿಗೆ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಆದರೆ ಈ ಕಛೇರಿಯ ಉಪ ಮುಖ್ಯ ಎಲೆಕ್ಟ್ರಿಕಲ್ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಶ್ರೀ. ಕೆ. ವಿ. ಸದಾನಂದ ರವರು ಈ ಅಪಾರ್ಟ್‌ಮೆಂಟ್ಸ್ ಕಟ್ಟಡಕ್ಕೆ ವಿದ್ಯುತ್ ಸಂಪರ್ಕವನ್ನು ಒದಗಿಸಲು ನಿರಾಕ್ಷೇಪಣಾ ಪತ್ರವನ್ನು ನೀಡಲು ರೂ. 25,000/- ಗಳ ಲಂಚದ ಹಣವನ್ನು ನೀಡುವಂತೆ ಅರ್ಜಿದಾರರಿಗೆ ಒತ್ತಾಯಿಸಿರುತ್ತಾರೆ. ಈ ಬಗ್ಗೆ ಅರ್ಜಿದಾರರು ಭ್ರಷ್ಟಾಚಾರ ನಿಗ್ರಹ ದಳಕ್ಕೆ ದೂರನ್ನು ಸಲ್ಲಿಸಿರುತ್ತಾರೆ.

ದೂರುದಾರರು ನೀಡಿದ ದೂರಿನನ್ವಯ ದಿನಾಂಕ: 30.11.2016 ರಂದು ಶ್ರೀ. ಕೆ. ವಿ. ಸದಾನಂದ, ಉಪ ಮುಖ್ಯ ಎಲೆಕ್ಟ್ರಿಕಲ್ ನಿರೀಕ್ಷಕರು, ಬಸವನಗುಡಿ, ಬೆಂಗಳೂರು ದಕ್ಷಿಣ ರವರು ದೂರುದಾರರಿಂದ ರೂ. 24,000/- ಗಳ ಲಂಚದ ಹಣವನ್ನು ಸ್ವೀಕರಿಸುತ್ತಿದ್ದ ಸಂದರ್ಭದಲ್ಲಿ ಭ್ರಷ್ಟಾಚಾರ ನಿಗ್ರಹ ದಳದ ಅಧಿಕಾರಿಗಳು ನಡೆಸಿದ ಕಾರ್ಯಾಚರಣೆಯಲ್ಲಿ ಸಿಕ್ಕಿ ಬಿದ್ದಿರುತ್ತಾರೆ.

ಶ್ರೀ. ಕೆ. ವಿ. ಸದಾನಂದ, ಉಪ ಮುಖ್ಯ ಎಲೆಕ್ಟ್ರಿಕಲ್ ಇನ್ಸ್‌ಪೆಕ್ಟರ್, ಬೆಂಗಳೂರು ದಕ್ಷಿಣ, ಬಸವನಗುಡಿ, ಬೆಂಗಳೂರು ರವರ ವಿರುದ್ಧ ಭ್ರಷ್ಟಾಚಾರ ತಡೆ ಕಾಯ್ದೆ-1988 ರ ಅಡಿಯಲ್ಲಿ ಪ್ರಕರಣವನ್ನು ದಾಖಲಿಸಿ ಅವರನ್ನು ದಸ್ತಗಿರಿ ಮಾಡಲಾಗಿದೆ.